

# ಕಲಬುರಗಿಯಲ್ಲಿ ಕಲ್ಲರಳಿ ಹೂವಾಗಿ

■ ಸಂಧ್ಯಾ ಹೊನಗುಂಟಿಕರ್

ಬೇಸಿಗೆ ಕಾಲ ಮತ್ತು ಬಿರು ಬೇಸಿಗೆ ಕಾಲ ಮಾತ್ರ ಇರುವ ಕಲಬುರಗಿಯೊಳಗೆ ಮನೆಯ ಟೆರೇಸಿನ ಮೇಲೆ ವಿಶಿಷ್ಟ ಕೈತೋಟ ಅರಳಿರುವುದನ್ನು ಕಂಡರೆ ಬೆರಗಾಗುತ್ತೀರಿ. ಮನೆ ಪ್ರವೇಶವಾಗುತ್ತಿದ್ದಂತೆ ಹಸಿರು ಕಣ್ಣನ್ನು ರಾಚುತ್ತದೆ. ಮನೆಯೊಳಗಿನ ಸಿಟೌಟ್, ಡೈನಿಂಗ್ ಹಾಲ್, ಬೆಡ್ ರೂಮುಗಳಲ್ಲಿ ಮೂಲೆ, ಟೀಪಾಯಿ, ಶೋಕೇಸು, ಕಿಟಕಿ, ಟೀವಿ ಸ್ಟ್ಯಾಂಡು, ಅಲ್ಲಲ್ಲಿ ಜೋಕಾಲಿ ಆಡುವ ತೂಗುಕುಂಡಗಳು, ಗೋಡೆಗಳಿಗೂ ಅಪ್ಪಿಕೊಂಡು ಹಬ್ಬಿರುವ ಹಸಿರು ಗಿಡಗಳು ಮುಗುಳು ನಗುತ್ತ ಸ್ವಾಗತಿಸುತ್ತವೆ.

ಪುಟ್ಟ ಹಿತ್ತಲಲ್ಲಿ ಮಾವು, ಪೇರಲ, ಸೀತಾಫಲ ಮರಗಳೊಂದಿಗೆ ಇನ್ನೂ ಹಲವು ಹೂ ಕುಂಡಗಳು. ಮೆಟ್ಟಿಲು ಹತ್ತುವಾಗಲು ಕುಂಡಗಳಲ್ಲಿ ನಳನಳಿಸುವ ಜೇಡ, ಕ್ರೋಟನ್, ಅಲೊವೆರಾ, ಬಗೆಬಗೆಯ ಕ್ಯಾಕ್ಟಸ್‌ಗಳು ತಮ್ಮ ಇರುವಿಕೆಯನ್ನು ಸೂಸುತ್ತವೆ. ಟೆರೇಸ್ ಮೇಲೆ ಹೋಗುತ್ತಲೇ ನೀಲಿ ಆಕಾಶ ಕಾಣದಂತೆ ಆಕ್ರಮಿಸಿದ ಹಸಿರು ಹೊನ್ನಿನದ್ದೇ ಕಾರುಬಾರು.

60x40ರ ಸೈಟದು. ಆಕರ್ಷಕವಾಗಿ ವೃತ್ತಾಕಾರದಲ್ಲಿ ಜೋಡಿಸಿದ ಬಣ್ಣಬಣ್ಣದ ಹೂ ಕುಂಡಗಳು ಹೂ ತೋಟದ ಅನುಭವ ನೀಡುತ್ತವೆ. ಕಂಬದಿಂದ ಕಂಬಕ್ಕೆ ಹಬ್ಬಿಸಿದ ವೀಳ್ಯದೆಲೆ, ಹಾಗಲ, ಪಡವಲ, ಅವರೆ, ಹೀರೆ ಮುಂತಾದ ಬಳ್ಳಿಗಳು, ಫಲ ತುಂಬಿ ಕಟಾವಾಗಿರುವ ದ್ರಾಕ್ಷಿ ಬಳ್ಳಿಯ ಕುರುಹು, ಮಾವು, ನೇರಲೆ, ದಾಳಿಂಬೆ, ನೆಲ್ಲಿ ನಿಂಬೆ, ಸೀತಾಫಲ ಇನ್ನೂ ಪುಟ್ಟದಾಗಿರುವ ಸೇಬಿನ ಸಸಿ ಎಲ್ಲವೂ ನಳನಳಿಸುತ್ತಿದ್ದು, ಬೆರಗು ಮೂಡಿಸುತ್ತವೆ.

ಪೇರಲೆ ಹಣ್ಣಿನ ವಾಸನೆ ನಮ್ಮನ್ನು ಸೆಳೆಯುತ್ತದೆ. ಡ್ರ್ಯಾಗನ್ ಹಣ್ಣಿನ ಗಿಡ ಕೂಡ ಇಲ್ಲಿ ಒಂದಾಗಿದೆ. ಈಗಾಗಲೇ ಸುಮಾರು ಐವತ್ತರಿಂದ ಅರವತ್ತು ಹಣ್ಣು ನೀಡಿ ಮತ್ತೆ ಹೊಸ ಫಸಲಿಗೆ ತನ್ನ ಮೈಯನ್ನು ಅಣಿಗೊಳಿಸಿಕೊಳ್ಳುತ್ತಿದೆ.

ಬೀದರ್ ಮೂಲದವರಾದ ಯಶೋಧಾ ಹಿಬಾರೆಯವರ ತಂದೆಗೆ ಗಿಡ ಮರಗಳೆಂದರೆ ಅಪಾರ ಪ್ರೀತಿ. ರಕ್ತಗತವಾಗಿ ಬಂದ ಈ ಒಲವು ಅವರಲ್ಲಿ ಕೊರೊನಾದ ದುರಿತ ಕಾಲದಲ್ಲಿ ಇನ್ನಷ್ಟು ಮೈದುಂಬಿಕೊಂಡಿತು. ಚಿಕ್ಕವಯಸ್ಸಿನಲ್ಲೇ ಸಂಗಾತಿಯನ್ನು ಕಳೆದುಕೊಂಡ ಯಶೋಧಾ ಈಗ ಮಗ, ಸೊಸೆ, ಮೊಮ್ಮಗನೊಂದಿಗೆ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ. ಇವರ ಈ ಸುಂದರ ಹವ್ಯಾಸಕ್ಕೆ ಅವರ ಮಗನದೂ ತುಂಬು ಸಹಕಾರವಿದೆ.

'ಟೆರೇಸ್‌ಗೆ ಬಂದ್ರ ನಂಗ ಹೊತ್ತು ಹೋಗಿದ್ದೆ ತಿಳಿಯಂಗಿಲ್ಲ. ಮೂರು ನಾಲ್ಕು ತಾಸು ಆರಾಮಾಗಿ ದಾಟಿಬಿಡ್ತದ. ಈ ವಿರಾಮ ಜೀವನದಾಗ



